ಬೆಲೆ ರೂ.2.50
Date of posting - 15th of every month at BPC Udupi.

# ಶ್ರೀ ಶಾರದಾ

ಮಾಸಪತ್ರಿಕೆ – 15 ಮಾರ್ಚ್ 2024

॥ ಧಿಯೋ ಯೋನಃ ಪ್ರಚೋದಯಾತ್ ॥

ಶ್ರೀಶಾರದಾ ಪತ್ರಿಕೆಗೆ ರಜತ ಸಂಭ್ರಮ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844
ಸಂಪುಟ-25 ಸಂಚಿಕೆ-3 ಪುಟಗಳು-8 Registered Under No.UDP/1260/2024-2026

## ಸನಾತನ ಧರ್ಮದ ಮೂಲ ವೇದಗಳು


–ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು.



ಸನಾತನ ಧರ್ಮದಲ್ಲಿ ವೇದಗಳು ಉನ್ನತ ಸ್ಥಾನವನ್ನು ಹೊಂದಿದ್ದು ಶ್ರೀ ಶಂಕರ ಭಗವತ್ಪಾದರ ಭಾಷ್ಯದಲ್ಲಿ ಹೇಳಿದಂತೆ ವೇದಗಳು ವಿಧಿಸಿದ ಕರ್ಮಗಳನ್ನು ನಿತ್ಯ ಅನುಷ್ಠಾನ ಮೂಲಕ ಭಕ್ತರು ಪಾಲಿಸಬೇಕು" ಎಂದು ಗುರುಗಳು ಆದೇಶ ನೀಡಿದರು.

(3ನೇ ಪುಟಕ್ಕೆ...)


## ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಆಚರಣೆ





ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಆಚರಣೆ ತಾ.08.03.24ರ ಶುಕ್ರವಾರ ಆಚರಿಸಲಾಯಿತು. ಬೆಳಿಗ್ಗೆ 9.00 ಗಂಟೆಗೆ ಕರ್ತೃಗಳಾಗಿ ಆ ದಿನದ ಕಾರ್ಯಕ್ರಮದ ಪ್ರಾಯೋಜಕರಾದ ಶ್ರೀಮತಿ ಸುಕನ್ಯಾ ರಾವ್ ಮತ್ತು ಸತೀಶ್ ರಾವ್ ದಂಪತಿಗಳು ಪ್ರಾರ್ಥನೆಯೊಂದಿಗೆ ಸಂಕಲ್ಪ ಮಾಡಿದರು. ತದನಂತರ ಸ್ವಾಧ್ಯಾಯ ಮಂಡಲಿ ಸದಸ್ಯರಿಂದ ರುದ್ರ ಮಪಾರಾಯಣ, ಲಲಿತಾ ಸಹಸ್ರನಾಮ ಪಾರಾಯಣ, ಅರ್ಚಕರಿಂದ ರುದ್ರಾಭಿಷೇಕ ನಡೆಯಿತು. ಶ್ರೀ ಶಾರದಾ ಭಜನಾ ಮಂಡಳಿ ಕುಂಜಿಬೆಟ್ಟು, ಶ್ರೀ ಜ್ಞಾನಶಕ್ತಿ ಭಜನಾ ಮಂಡಳಿ ಬಾರಕೂರು, ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿ, ಇದರ ಮಹಿಳಾ ವೇದಿಕೆಯ ಸದಸ್ಯೆಯರಿಂದ ಭಜನಾ ಕಾರ್ಯಕ್ರಮ ಜರುಗಿತು. (3ನೇ ಪುಟಕ್ಕೆ...)

## ಶ್ರೀ ಶಾರದಾ ಮಂದಿರದಲ್ಲಿ ಪ್ರತಿಷ್ಠಾವರ್ಧಂತಿ ಹಾಗೂ ಲಕ್ಷಕುಂಕುಮಾರ್ಚನೆ







ಉಡುಪಿ ಕುಂಜಿಬೆಟ್ಟುವಿನ ಶ್ರೀ ಶಾರದಾ ಮಂದಿರದಲ್ಲಿ ತಾ.02.03.2024ರಂದು ಶ್ರೀದೇವಿಯ ಪ್ರತಿಷ್ಠಾವರ್ಧಂತಿ ಕಾರ್ಯಕ್ರಮವು ವಿವಿಧ ಧಾರ್ಮಿಕ ವಿಧಿವಿಧಾನಗಳೊಂದಿಗೆ ಜರುಗಿತು. ಮುಂಜಾನೆ ವರ್ಧಂತಿ ಕರ್ತೃಗಳಾಗಿ ಶ್ರೀಮತಿ ಜ್ಯೋತಿ ಹಾಗೂ ಸುಧಾಕರ ರಾವ್ ದಂಪತಿಗಳು ಮತ್ತು ಸಂಘದ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ವಿವಿಧ ಪದಾಧಿಕಾರಿಗಳೆಲ್ಲರೂ ಸೇರಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವುದರ ಮೂಲಕ ಪ್ರತಿಷ್ಠಾವರ್ಧಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಆರಂಭದಲ್ಲಿ ಮಂದಿರದಲ್ಲಿ ಶ್ರೀ ಗಣಪತಿ ಹೋಮ, ನವಕಲಶ ಸ್ಥಾಪನೆ, ಅಧಿವಾಸ ಹೋಮ, ಕಲಶಾಭಿಷೇಕ, ರುದ್ರಾಭಿಷೇಕ, ಶ್ರೀ ಲಲಿತಾತ್ರಿಶತಿ ನಾಮಾರ್ಚನೆ, ಶ್ರೀಚಕ್ರ ಪೂಜೆ, ಮಧ್ಯಾಹ್ನ 12ಕ್ಕೆ ಮಹಾಪೂಜೆ ನೆರವೇರಿತು. ಪೂಜೆಯ ಬಳಿಕ ಭಕ್ತಾದಿಗಳಿಗೆ ಪ್ರಸಾದ ವಿತರಣೆ, ಬ್ರಾಹ್ಮಣ ಸುಹಾಸಿನಿ ಆರಾಧನೆ ಮತ್ತು 200 ಮಂದಿಗೆ ಅನ್ನಸಂತರ್ಪಣೆ ಜರಗಿತು. ಎಲ್ಲಾ ಧಾರ್ಮಿಕ ವಿಧಿವಿಧಾನಗಳನ್ನು ತಂತ್ರಿಯವರಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿ ಹಾಗೂ ಅರವಿಂದ ಶರ್ಮ ನೆರವೇರಿಸಿದರು. ಸಂಘದ ಅಧ್ಯಕ್ಷರಾದ ಕೆ.ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ ಪ್ರಭಾಕರ ಭಂಡಿ, ಗೌರವ ಸಲಹೆಗಾರರು, ಸಂಘದ ನಿರ್ದೇಶಕರು, ಸರ್ವರೀತಿಯಲ್ಲಿ ಕಾರ್ಯಕ್ರಮಕ್ಕೆ ಸಹಕರಿಸಿದರು.

**ಲಕ್ಷಕುಂಕುಮಾರ್ಚನೆ :** ಅದೇ ದಿನ ಸಂಜೆ 6 ಗಂಟೆಯಿಂದ ವಿಶೇಷವಾಗಿ ಶ್ರೀ ಶಾರದಾ ಮಂದಿರದಲ್ಲಿ ಮೊದಲ ಬಾರಿಗೆ ಲಕ್ಷಕುಂಕುಮಾರ್ಚನೆ ನೆರವೇರಿತು. ಸಮಾಜದ 120 ಮಹಿಳೆಯರು ಹಾಗೂ ಪುರುಷರು ಪಾಲ್ಗೊಂಡು ಲಕ್ಷಕುಂಕುಮಾರ್ಚನೆಯನ್ನು ಶ್ರದ್ಧೆಯಿಂದ ಭಕ್ತಿಪೂರ್ವಕವಾಗಿ ಪಠಿಸಿ ನೆರವೇರಿಸಿದರು. ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ನಿರ್ದೇಶನದಲ್ಲಿ ಅರವಿಂದ ಶರ್ಮ ಅವರು ಶ್ರೀ ಶಾರದಾ ಮಂಟಪದಲ್ಲಿ ಶ್ರೀ ಶಾರದಾ ದೇವಿಗೆ ಪೂಜೆ ಸಲ್ಲಿಸಿದರು. ಮಂದಿರದಲ್ಲಿ ಚಂಡಿಕಾ ಪಾರಾಯಣವು ಜರಗಿತು. ಸಂಜೆಯ ವಿಶೇಷ ಪೂಜೆಯೊಂದಿಗೆ ಪ್ರಸಾದ ವಿತರಣೆ ಹಾಗೂ ಫಲಹಾರದೊಂದಿಗೆ ಕಾರ್ಯಕ್ರಮವು ಸಂಪನ್ನಗೊಂಡಿತು.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-2.



ಶ್ರೀ ಶಾರದಾ ದೇವಸ್ಥಾನದಲ್ಲಿ

**ಶ್ರೀ ಶಂಕರ ಜಯಂತಿ ಆಚರಣೆ ಹಾಗೂ ಸಾಮೂಹಿಕ ಉಪನಯನ**

ಕಾರ್ಯಕ್ರಮಗಳು

ತಾ.12-05-2024ನೇ ಆದಿತ್ಯವಾರ ನೆರವೇರಲಿದೆ.

ಕಾರ್ಯಕ್ರಮಗಳ ವಿವರ : ಬೆಳಿಗ್ಗೆ 8-30 ಗಂಟೆಗೆ ಪ್ರಾರ್ಥನೆ
ಶ್ರೀ ಶಂಕರ ಅಷ್ಟೋತ್ತರ ಪಾರಾಯಣ, ಶ್ರೀ ಶಂಕರ ವಿಜಯ ಪಾರಾಯಣ,
ಶ್ರೀ ಶಂಕರಾಚಾರ್ಯರ ಮೂರ್ತಿಗೆ ಅಭಿಷೇಕ, ಪೂಜೆ ಹಾಗೂ ವಿವಿಧ ಧಾರ್ಮಿಕ
ಕಾರ್ಯಕ್ರಮಗಳೊಂದಿಗೆ ಮಹಾಪೂಜೆ ನಡೆಯಲಿದೆ.
ಮಧ್ಯಾಹ್ನ 12-30ಕ್ಕೆ ಅನ್ನಸಂತರ್ಪಣೆ

-ಆಡಳಿತ ಮಂಡಳಿ

## ಶ್ರೀ ಶಾರದಾ ಪತ್ರಿಕೆಗೆ ರಜತ ಸಂಭ್ರಮ

ಶ್ರೀಶಾರದಾ ಪತ್ರಿಕೆಯು 25ನೇ ವರ್ಷಕ್ಕೆ ಕಾಲಿರಿಸುತ್ತಿರುವ ಸಂದರ್ಭದಲ್ಲಿ ರಜತ ಸಂಭ್ರಮವನ್ನು ಈ ವರ್ಷ ಆಚರಿಸುವ ಬಗ್ಗೆ ಅಭಿಪ್ರಾಯವನ್ನು ಸಂಗ್ರಹಿಸಲು ತಾ.07.04.2024 ರಂದು ಸಂಜೆ 5ಕ್ಕೆ ಪತ್ರಿಕೆಯ ಲೇಖಕರ, ಜಾಹೀರಾತುದಾರರ, ಮಹಾಪೋಷಕರ, ಚಂದಾದಾರರ, ಈವರೆಗಿನ ಸಂಪಾದಕರು ಹಾಗೂ ಹಿತೈಷಿಗಳ ಸಭೆಯನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಶ್ರೀಶಾರದಾ ಪತ್ರಿಕೆಯ ಅಭಿಮಾನಿಗಳು ಆಗಮಿಸಿ ಸಲಹೆ ಸೂಚನೆಗಳನ್ನು ನೀಡಬೇಕಾಗಿ ಅಪೇಕ್ಷೆ.

– ಯು. ಅರವಿಂದ ಕುಮಾರ್, ಪ್ರಧಾನ ಸಂಪಾದಕರು ಮತ್ತು ಸಂಪಾದಕ ಮಂಡಳಿ



ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

## ಸಂಶೋಧನೆಗೆ ಡಾಕ್ಟರೇಟ್ ಪದವಿ



ಶ್ರೀಮತಿ ಮೀನಾಕ್ಷಿ ಅಜಿತ್, (ಅಸಿಸ್ಟೆಂಟ್ ಪ್ರೊಫೆಸರ್–ನಿಟ್ಟೆ ಮೀನಾಕ್ಷಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ; ನಿಟ್ಟೆ ಯುನಿವರ್ಸಿಟಿ ಬೆಂಗಳೂರು ಕ್ಯಾಂಪಸ್) ಅವರು B.E, M.Tech ಪದವೀಧರರಾಗಿದ್ದು ಇದೀಗ ಪಿ.ಎಚ್‌ಡಿ (P.hd) ಪದವಿಯನ್ನು ಪಡೆದಿರುತ್ತಾರೆ. ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ಯೂನಿವರ್ಸಿಟಿ ಬೆಳಗಾವಿಯು ಇವರ "Deep Learning Approach to Secure Data in the Cloud Environment for DDoS Attacks" ಸಂಶೋಧನೆಗೆ ಡಾಕ್ಟರೇಟ್ ಪದವಿಯನ್ನು ನೀಡಿರುತ್ತದೆ. ಇವರು ಕಟೀಲು ಭವಾನಿ ಶಂಕರ್ ರಾವ್ ಮತ್ತು ಬೊಕ್ಕಸ ವಿಜಯಲಕ್ಷ್ಮಿ ಅವರ ಪುತ್ರಿಯಾಗಿದ್ದು ದಿವಂಗತ ಬೈಲಕೆರೆ ರಾಮಚಂದ್ರರಾವ್ ಹಾಗೂ ಕೊಡವೂರು ಅನ್ನಪೂರ್ಣ ಅವರ ಸೊಸೆ.

## ಡಾ। ಗೌತಮಿ ಕೆ. ಇವರಿಗೆ ಅಂತಾರಾಷ್ಟ್ರಿಯ ಪ್ರಶಸ್ತಿ



ಭಾರತ, ಶ್ರೀಲಂಕಾ ಹಾಗೂ ನೇಪಾಳ ದೇಶಗಳ ಡೆಂಟಲ್ ಕಾಲೇಜುಗಳನ್ನು ಒಳಗೊಂಡ "ಇಂಟರ್‌ನ್ಯಾಶನಲ್ ಕಾಲೇಜ್ ಆಫ್ ಡೆಂಟಿಸ್ಟ್" ಸಂಸ್ಥೆಯಿಂದ 2023ನೇ ಸಾಲಿನ ಘಟಿಕೋತ್ಸವ ಹಾಗೂ ಅರ್ಹತಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಡಾ। ಗೌತಮಿ ಕೆ. ಇವರಿಗೆ "Best MDS Student" ಎಂಬ ಪ್ರಶಸ್ತಿ ನೀಡಿ, ಸಂಸ್ಥೆಯು ಗೋವಿಂದ ಬಂಗ್ ಇಂದ್ರಪ್ರಸ್ಥ ವಿಶ್ವವಿದ್ಯಾಲಯದ ಸಭಾಂಗಣ, ನವದೆಹಲಿ ಇಲ್ಲಿ ಗೌರವಿಸಲಾಯಿತು. ಇವರು ಮಂಗಳೂರಿನ ಎ.ಬಿ.ಶೆಟ್ಟಿ ಕಾಲೇಜ್ ಆಫ್ ಡೆಂಟಲ್ ಸೈನ್ಸ್‌ನ ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದು ಆರ್ಥೊಡೊಂಟಿಕ್ಸ್ ವಿಭಾಗದಲ್ಲಿ ನಿಟ್ಟೆ ವಿಶ್ವವಿದ್ಯಾಲಯದಲ್ಲಿ ಪ್ರಥಮ ರ್‍ಯಾಂಕ್ ಗಳಿಸಿರುತ್ತಾರೆ. ಪ್ರಸ್ತುತ 'ಬ್ಲೂ ಟೂತ್ ಡೆಂಟಲ್ ಸೆಂಟರ್', ಭುಜಂಗ ಪಾರ್ಕ್ ಎದುರು, ಅಜ್ಜರಕಾಡು, ಉಡುಪಿಯಲ್ಲಿ ವೈದ್ಯವೃತ್ತಿ ನಿರ್ವಹಿಸುತ್ತಿದ್ದಾರೆ. ಇವರು ನಮ್ಮ ಸಂಘದ ನಿರ್ದೇಶಕರೂ, ನಿವೃತ್ತ ಬಿಎಸ್‌ಎನ್‌ಎಲ್ ಎಜಿಎಮ್ ಶ್ರೀ ಕೃಷ್ಣಮೂರ್ತಿ ಬ್ರಹ್ಮಾವರ ಹಾಗೂ ಶ್ರೀಮತಿ ಸುಮಂಗಲ ಇವರ ಪುತ್ರಿ

## ಕಾರ್ಯಕ್ರಮ ರಾಯಭಾರಿಯಾಗಿ ಶ್ರೀಮತಿ ಸವಿತಾ ಎರ್ಮಾಳ್ ಆಯ್ಕೆ



ಶ್ರೀಮತಿ ಸವಿತಾ ಎರ್ಮಾಳ್, ಉಪನ್ಯಾಸಕರು, ಸರಕಾರಿ ಪದವಿಪೂರ್ವ ಕಾಲೇಜು ಬ್ರಹ್ಮಾವರ ಇವರನ್ನು "ಹೆಣ್ಣು ಮಕ್ಕಳನ್ನು ಉಳಿಸಿ, ಹೆಣ್ಣು ಮಕ್ಕಳನ್ನು ಓದಿಸಿ" (ಭೇಟಿ ಬಚಾವೊ ಭೇಟಿ ಪಡಾವೊ) ಮತ್ತು ಗರ್ಭಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣಲಿಂಗ ಪತ್ತೆ ತಂತ್ರವಿಧಾನಗಳ (ಲಿಂಗ ಆಯ್ಕೆಯ ನಿಷೇಧ) ಕಾಯ್ದೆ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮದ ರಾಯಭಾರಿಯಾಗಿ ಉಡುಪಿ ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಯವರಾದ ಡಾ.ಕೆ.ವಿದ್ಯಾಕುಮಾರಿ (ಭಾ.ಆ.ಸೇ.) ಆಯ್ಕೆ ಮಾಡಿರುತ್ತಾರೆ. ಇವರು ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ (ರಿ) ಬ್ರಹ್ಮಾವರ ಇದರ ಕಾರ್ಯದರ್ಶಿಯಾಗಿರುವರು ಹಾಗೂ ಶ್ರೀ ಶಾಂಕರತತ್ವ ಪ್ರಸಾರ ಸಮಿತಿ ಉಡುಪಿ ಜಿಲ್ಲೆಯ ಸಹಸಂಚಾಲಕರಾಗಿರುವರು. ಅಲ್ಲದೆ ಶಾಲಾ ಶಿಕ್ಷಣ ಇಲಾಖೆ ( ಪದವಿಪೂರ್ವ ವಿಭಾಗ) ಇದರ ರಾಷ್ಟ್ರೀಯ ಸೇವಾ ಯೋಜನಾ ಕೋಶ ಬೆಂಗಳೂರು ಇದರ ಮಂಗಳೂರು ವಿಭಾಗದ ವಿಭಾಗಾಧಿಕಾರಿಯಾಗಿ ಮಾನ್ಯ ನಿರ್ದೇಶಕರು ನಿಯೋಜಿಸಿರುವರು.


### ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 10.50% (ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10.5% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12.5% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷದಿಂದ 5 ವರ್ಷದ ತನಕ | : 9% |
| 5 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% | | |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2016-17ರಿಂದ 2021-22ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ





**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.
★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ


ಕಡಬ ಕುಂಬಾಟ್ ರಂಜಿತ್ ಶರ್ಮಾ ಅವರ ಪತ್ನಿ ಮತ್ತು ದಿವಂಗತ ಕಡಬ ಕುಂಬಟ್ ಭರತೇಶ್ವರ ಶರ್ಮಾ ಮುಂಬಯಿ ಅವರ ಸೊಸೆ ಶ್ರೀಮತಿ ಜ್ಯೋತಿ ಇವರು ಅಯೋಧ್ಯೆಯ ರಾಮಮಂದಿರದಲ್ಲಿ ನೃತ್ಯ ಕಾರ್ಯಕ್ರಮ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಪೇಜಾವರ ಮಠದ ಸ್ವಾಮೀಜಿಯವರು ಇವರನ್ನು ಸನ್ಮಾನಿಸಿದರು.

## ಡಾ. ಜನಾರ್ದನ ಹಾವಂಜೆ ಅವರಿಗೆ ಎಕ್ಸಲೆನ್ಸ್ ಇನ್ ಕ್ರಾಫ್ಟ್ ರಾಷ್ಟ್ರೀಯ ಪುರಸ್ಕಾರ



ಭಾರತ ಸರ್ಕಾರದ ಮಾನ್ಯತೆ ಪಡೆದಿರುವ ತೆಲಂಗಾಣದ ಕ್ರಾಫ್ಟ್ ಕೌನ್ಸಿಲ್ ಸಂಸ್ಥೆಯು ಕೊಡಮಾಡುವ ಶ್ರೀಮತಿ ಪಿಂಗಳೆ ಕಮಲಾರೆಡ್ಡಿ ಎಕ್ಸಲೆನ್ಸ್ ಇನ್ ಕ್ರಾಫ್ಟ್ ರಾಷ್ಟ್ರೀಯ ಪುರಸ್ಕಾರವು ಕೊಂಕಣ ತೀರ ಪ್ರದೇಶದ ಕಾವಿ ಕಲೆಯ ಉಳಿವು ಮತ್ತು ಬೆಳೆಸುವಿಕೆಗೆ ಸುಮಾರು 20 ವರ್ಷಗಳಿಂದಲೂ ಸತತವಾಗಿ ಶ್ರಮಿಸುತ್ತಿರುವ ಡಾ. ಜನಾರ್ದನ ಹಾವಂಜೆಯವರಿಗೆ ಲಭಿಸಿದೆ. ಮಂಗಳೂರಿನ ಶ್ರೀನಿವಾಸ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಹಾಗೂ ಮಣಿಪಾಲದ ಗಾಂಧಿಯನ್ ಸೆಂಟರ್ ಫಾರ್ ಫಿಲಾಸಫಿಕಲ್ ಆರ್ಟ್ಸ್ ಮತ್ತು ಸೈನ್ಸ್‌ನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ (ವಿಸಿಟಿಂಗ್) ಹಾವಂಜೆಯವರು ಇಂದಿಗೆ ಅಳಿದು ಹೋಗುತ್ತಿರುವ ಈ ದೇಶಿಯ ಕಾವಿ ಕಲೆಯ ಉಳಿವಿಗಾಗಿ ಜಾಗತಿಕ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಾವಿ ಕಲೆಯ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸುವ ಕಾರ್ಯವನ್ನು ನಡೆಸುತ್ತಾ ಹಲವಾರು ಕಾರ್ಯಾಗಾರಗಳು, ಶಿಬಿರಗಳು ಕಲಾ ಪ್ರದರ್ಶನಗಳು ಮತ್ತು ಅಧ್ಯಯನ ಪ್ರಬಂಧಗಳನ್ನು ಮಂಡಿಸುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಹೈದರಾಬಾದನಲ್ಲಿ ಸಿಸಿಟಿ ಕಮಲ ಸ್ಪೇಸ್ನಲ್ಲಿ ಇವರ ಕಾವಿ ಕಲಾ ಕೃತಿಗಳ ಪ್ರದರ್ಶನವೂ ನಡೆಯಲಿದೆ.

ಕೆ. ಆರಾಧ್ಯ ಹೆಬ್ಬಾರ್, ಸುಮೇಧ ಹೆಬ್ಬಾರ್ ಆದೀಶ್ ಎ ರಾವ್ ಇವರು ರಾಜ್ಯಮಟ್ಟದ ಅಬಾಕಾಸ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿರುವ ಕಬ್ಬಿನಾಲೆಯ ಹೆಬ್ಬಾರ್ ಸ್ಥಾನಿಕ ಸಂಘದ ಪುಟಾಣಿಗಳು.




*Dr. Sanath S. Rao*
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CLINIC**

1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

# ಟೇಕ್ವಾಂಡೋ ಮಾಸ್ಟರ್ ಶ್ರೀಪಾದ ಆರ್.ರಾವ್ "ಇಂಟರ್ನ್ಯಾಷನಲ್ ಕೋಚ್-ಲೆವೆಲ್ 2"ಗೆ ಪದೋನ್ನತಿ

ಕರ್ನಾಟಕದ ಹೆಸರಾಂತ ಟೇಕ್ವಾಂಡೋ ತಜ್ಞ, ತರಬೇತುದಾರ, ಮಾರ್ಗದರ್ಶಕ ಮತ್ತು ಆಡಳಿತಗಾರರಾದ, ಭಾರತೀಯ ವಾಯುಪಡೆಯ ಟೇಕ್ವಾಂಡೋ ಮಾಸ್ಟರ್ ಶ್ರೀಪಾದ ಆರ್ ರಾವ್ ಅವರು ಲೆವೆಲ್ 2 ಅಂತರರಾಷ್ಟ್ರೀಯ ಟೇಕ್ವಾಂಡೋ ಪ್ರಶಿಕ್ಷಕರಾಗಿ ವರ್ಲ್ಡ್ ಟೇಕ್ವಾಂಡೋ ಸಂಸ್ಥೆಯಿಂದ ಪದೋನ್ನತಿ ಪಡೆದಿರುತ್ತಾರೆ.

15 ಜನವರಿಯಿಂದ 21 ಜನವರಿ 2024ರವರೆಗೆ ವರ್ಲ್ಡ್ ಟೇಕ್ವಾಂಡೋ ನಡೆಸಿದ ನಿಗದಿತ ಅಡ್ವಾನ್ಸ್ಮೆಂಟ್ ಕೋರ್ಸ್‌ನಲ್ಲಿ ಟೇಕ್ವಾಂಡೋ ಮಾಸ್ಟರ್ ರಾವ್ ಸೇರಿದಂತೆ ಜಗತ್ತಿನಾದ್ಯಂತದಿಂದ ಸಂಬಂಧಿತ ನ್ಯಾಷನಲ್ ಫೆಡೆರೇಶನ್ನಿಂದ ಶಿಫಾರಸು ಮಾಡಲಾದ ಇಂಟರ್ನ್ಯಾಷನಲ್ ಟೇಕ್ವಾಂಡೋ ಕೋಚ್ ಲೆವೆಲ್-1 ದರ್ಜೆಯ ಒಟ್ಟು 11 ಶ್ರೇಯಾಂಕಿತ ಅಭ್ಯರ್ಥಿಗಳು ಭಾಗವಹಿಸಿದ್ದರು. 7 ದಿನಗಳ ಕೋರ್ಸ್‌ನ ಪಠ್ಯಕ್ರಮವು ವರ್ಲ್ಡ್ ಟೇಕ್ವಾಂಡೋ ಫೆಡರೇಶನ್ ನಿಯಮಗಳು ಮತ್ತು ಆಡಳಿತ ವ್ಯವಸ್ಥೆ, ಸ್ಪರ್ಧೆಯ ನಿಯಮಾವಳಿ ಮತ್ತು ಅದರ ಕೇಸ್ ಸ್ಟಡೀಸ್, ವೈದ್ಯಕೀಯ ಆರೈಕೆ ಮತ್ತು ಆಂಟಿ-ಡೋಪಿಂಗ್, ಕ್ರೀಡಾಪಟುಗಳ ಸುರಕ್ಷತೆ, ಕ್ರೀಡಾ ಮನೋವಿಜ್ಞಾನ, ಆಟಗಳ ನಿರ್ವಹಣೆ ಮತ್ತು ತರಬೇತಿ ಕೌಶಲ್ಯಗಳನ್ನು ಒಳಗೊಂಡಿತ್ತು. ಅಂತಿಮ ಲಿಖಿತ ಪರೀಕ್ಷೆಯಲ್ಲಿ ಟೇಕ್ವಾಂಡೋ ಮಾಸ್ಟರ್ ರಾವ್ ಅವರು 95% ಅಂಕಗಳನ್ನು ಪಡೆದು 'ಇಂಟರ್ನ್ಯಾಷನಲ್ ಕೋಚ್-ಲೆವೆಲ್ 2' ಶ್ರೇಣಿಗೆ ಪದೋನ್ನತಿ ಪಡೆದಿದ್ದಾರೆ ಮತ್ತು ಇದರೊಂದಿಗೆ ಅವರು ರಾಷ್ಟ್ರೀಯ ತಂಡದ ತರಬೇತುದಾರರಾಗಿ ಮತ್ತು ಗ್ರೇಡ್-4, ಗ್ರೇಡ್-6, ಗ್ರೇಡ್-10 & ಗ್ರೇಡ್-14 ಶ್ರೇಣಿಗಳ ಇಂಟರ್ನ್ಯಾಷನಲ್ ಚಾಂಪಿಯನ್‌ಶಿಪ್‌ನಲ್ಲಿ ತಂಡದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಲು ಅರ್ಹತೆಯನ್ನು ಗಳಿಸಿದ್ದಾರೆ. 2020ರಲ್ಲಿ ಟೇಕ್ವಾಂಡೋ ಮಾಸ್ಟರ್ ರಾವ್ ಅವರು ಲೆವೆಲ್-1 ಅಂತರಾಷ್ಟ್ರೀಯ ಪ್ರಶಿಕ್ಷಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು. ಅವರ ಈ ಸಾಧನೆಗಾಗಿ ಕರ್ನಾಟಕ ಸರ್ಕಾರದಿಂದ ಶ್ಲಾಘನೆಯನ್ನು ಪಡೆದಿದ್ದರು. ನಂತರ ಜೂನ್ 2023ರಲ್ಲಿ ಅವರನ್ನು ದಕ್ಷಿಣ ಕೊರಿಯಾ ಗಣರಾಜ್ಯದ ಕ್ರೀಡೆ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವಾಲಯದ ಸಂಪೂರ್ಣ ಪ್ರಾಯೋಜಕತ್ವದೊಂದಿಗೆ ಸಿಯೋಲ್ ಮತ್ತು ಮುಜುದಲ್ಲಿ ನಡೆದ WT ಪಾರ್ಟ್ನರ್‌ಶಿಪ್ ಟೇಕ್ವಾಂಡೋ ಪ್ರೋಗ್ರಾಮ್‌ನಲ್ಲಿ ಭಾಗವಹಿಸಲು ಭಾರತದ ಮಾಸ್ಟರ್‌ಗಳಲ್ಲಿ ಒಬ್ಬರಾಗಿ ವಿಶ್ವ ಟೇಕ್ವಾಂಡೋ ಫೆಡರೇಷನ್‌ನಿಂದ ಆಯ್ಕೆಯಾಗಿದ್ದರು.

ಇವರು ಉಂಡಾರಿನ ರವಿ ಸದಾಶಿವ ರಾವ್ ಹಾಗೂ ಶ್ರೀಮತಿ ಪದ್ಮಲತಾ ರವಿ ರಾವ್ ಅವರ ಸುಪುತ್ರನಾಗಿದ್ದು, ಪ್ರಸ್ತುತ ಭಾರತೀಯ ವಾಯುಸೇನೆಯಲ್ಲಿ ಸೇವೆ ಸಲ್ಲಿಸುವುದಲ್ಲದೆ, 2012ರಿಂದ ರಾವ್ಸ್ ಯುವ ಆಕಾಡೆಮಿ ಎಂಬ ಟೇಕ್ವಾಂಡೋ ತರಬೇತಿ ಕೇಂದ್ರ ಸ್ಥಾಪಿಸಿ ಅದರ ಅಡಿಯಲ್ಲಿ ಹಲವಾರು ರಾಜ್ಯ ಹಾಗೂ ರಾಷ್ಟ್ರಮಟ್ಟದ ಕ್ರೀಡಾಪಟುಗಳನ್ನು ಪೋಷಿಸಿ 620ಕ್ಕಿಂತಲೂ ಹೆಚ್ಚಿನ ಪದಕ ಗೆಲ್ಲುವಲ್ಲಿ ಯಶಸ್ವಿಯಾಗಿರುತ್ತಾರೆ ಹಾಗೂ ಯಕ್ಷಿತ್ ಯುವ ಫೌಂಡೇಶನ್ ಸಂಸ್ಥೆಯ ಅಧ್ಯಕ್ಷರಾಗಿ ಹಲವಾರು ಕ್ರೀಡಾ, ಸಾಂಸ್ಕೃತಿಕ, ಮಕ್ಕಳ ವಿಕಾಸ, ಮಹಿಳಾ ಸಬಲೀಕರಣ ಮುಂತಾದ ಸಾಮಾಜಿಕ ಸೇವೆ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುತ್ತಾರೆ.

## ಸನಾತನ ಧರ್ಮದ ಮೂಲ ವೇದಗಳು

■...1ನೇ ಪುಟದಿಂದ

ತಾ 17/2/24 ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸ್ಥಾನಿಕ ಬ್ರಾಹ್ಮಣ ಶಿಷ್ಯ ಸಮಾಜವನ್ನು ಅವರು ಅನುಗ್ರಹಿಸಿದರು. ಶೃಂಗೇರಿಯಿಂದ ಆಗಮಿಸಿದ ಗುರುಗಳನ್ನು ಪೂರ್ಣಕುಂಭ ಮೂಲಕ ಸ್ವಾಗತಿಸಲಾಯಿತು. ಶ್ರೀ ನವಚಂಡಿ ಹವನದ ಪೂರ್ಣಾಹುತಿಯನ್ನು ಗುರುಗಳ ಸಾನಿಧ್ಯದಲ್ಲಿ ನೆರವೇರಿಸಲಾಯಿತು. ವೇದಘೋಷದೊಂದಿಗೆ ಶ್ರೀ ಸಭಾಕ್ಕೆ ಪ್ರಥಮ ಬಾರಿ ಆಗಮಿಸಿದ ಗುರುಗಳ ಪಾದಸ್ಪರ್ಶದ ಶಾಶ್ವತ ಸ್ಮರಣ ಫಲಕವನ್ನು ಶ್ರೀ ಗುರುಗಳು ಅನಾವರಣಗೊಳಿಸಿದರು.

ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷ ಕುಮಾರ್ ಕೇದಿಗೆ ಮತ್ತು ಶ್ರೀಮತಿ ಕನಕವಲ್ಲೀ ದಂಪತಿಗಳು ಧೂಳೀ ಪಾದಪೂಜೆ ನಡೆಸಿದರು. ಶ್ರೀ ಸುಬ್ರಹ್ಮಣ್ಯ ಸಭಾ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಫಲಕಾಣಿಕೆ ಸಮರ್ಪಿಸಲಾಯಿತು. ಅಧ್ಯಕ್ಷರ ಸ್ವಾಗತ ಭಾಷಣ ಬಳಿಕ ಶ್ರೀ ಗುರುಗಳ ದಿವ್ಯಹಸ್ತದಿಂದ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿ ವೇದ ಪೋಷಕ ನಿಧಿಯನ್ನು ಹಸ್ತಾಂತರಿಸಲಾಯಿತು. ಶ್ರೀ ಗುರುಗಳ ಅಶೀರ್ವಚನ ಬಳಿಕ ನೆರೆದ ಭಕ್ತರಿಗೆ ಗುರುಗಳು ಫಲಮಂತ್ರಾಕ್ಷತೆ ನೀಡಿದರು. ಶ್ರೀ ಸಭಾದ ಕಾರ್ಯದರ್ಶಿ ಕರುಣ್ ರಾವ್ ಬೆಳ್ಳೆ ಕಾರ್ಯಕ್ರಮ ಸಂಘಟಿಸಿದರೆ ಕೋಶಾಧಿಕಾರಿ ಪಿ.ಶ್ರೀಕಾಂತ್ ರಾವ್ ನಿರೂಪಿಸಿದರು. ರಘುವೀರ್ ಪೆರ್ಡೂರು ಪೋಟೋ ವೀಡಿಯೊ ಒದಗಿಸಿ ಸಹಕರಿಸಿದರು. ಶ್ರೀ ಸಭಾ ಉಪಾಧ್ಯಕ್ಷರುಗಳಾದ ಡಾ। ಎ.ಪಿ.ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಜೊತೆ ಕಾರ್ಯದರ್ಶಿಗಳಾದ ಅನಿಲ್ ರಾವ್ ಬಿ.ಎಸ್, ಚೇತನ್ ಶರ್ಮ, ಯುವ ವೇದಿಕೆ ಅಧ್ಯಕ್ಷ ಅನಿಲ್ ನೆಲ್ಲಿಕುಂಜೆ, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ವ್ಯವಸ್ಥೆಗಳಲ್ಲಿ ಸಹಕರಿಸಿದರು.

## ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಆಚರಣೆ

■...1ನೇ ಪುಟದಿಂದ

ನಮ್ಮ ಸಮಾಜದ ನಿಧಿ ಶರ್ಮ ಇವರು ಶಿವನ ಸ್ತೋತ್ರಗಳಿಗೆ ಭರತನಾಟ್ಯ ಪ್ರದರ್ಶನ ನೀಡಿದರು. ತದನಂತರ ಮಹಾಪೂಜೆ ನೆರವೇರಿತು. ನಂತರ ಆಗಮಿಸಿದ ಭಕ್ತಾಧಿಗಳಿಗೆ ಲಘು ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು. ದೇವಸ್ಥಾನದಲ್ಲಿ ಪೂಜಾ ಕಾರ್ಯಗಳಿಗೆ ಅರ್ಚಕರು ಹಾಗೂ ಮ್ಯಾನೇಜರ್ ಸಹಕರಿಸಿದರು. ಈ ಎಲ್ಲಾ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿಯವರಾದ ಪ್ರಭಾಕರ ಭಂಡಿ, ಕೋಶಾಧಿಕಾರಿ ಗಣೇಶ್ ಹೆಬ್ಬಾರ್ ಮತ್ತು ಎಲ್ಲಾ ಪದಾಧಿಕಾರಿಗಳು, ನಿರ್ದೇಶಕರು ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ



ಪ್ರಾಯೋಜಕತ್ವವನ್ನು ಶ್ರೀಮತಿ ಸುಕನ್ಯಾ ರಾವ್ ಮತ್ತು ಸತೀಶ ರಾವ್ ದಂಪತಿಗಳು ನೀಡಿ ಸಹಕರಿಸಿದರು.



**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

ಪ್ರೊ : ನಯನಾಭಿರಾಮ ಸ್ವಾಮಿ
ಮೊಬೈಲ್ : 9449101303, 9632500864

**ಉದಯಾದ್ರಿ ಕೆಟರರ್ಸ್**

ಉಮಾಮಹೇಶ್ವರ ಉದಯಾದ್ರಿ ಮಠ,
ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಹತ್ತಿರ,
"ಅಂಗೀರಸ", ಪಡುಬಿದ್ರಿ, ಉಡುಪಿ ಜಿಲ್ಲೆ.

ಮದುವೆ ಇನ್ನಿತರ ಸಮಾರಂಭಗಳಿಗೆ
ಶುಚಿರುಚಿಯಾದ ಅಡುಗೆ
ಮಾಡಿಕೊಡಲಾಗುವುದು.
ಶ್ರಾದ್ಧ ಮತ್ತು ಔರ್ಧ್ವದೈಹಿಕ ಕ್ರಿಯೆಗಳನ್ನು
ಅಲ್ಲದೇ ಇತರ ವೈದಿಕ ಕಾರ್ಯಕ್ರಮಗಳನ್ನು
ಕೂಡಾ ನಡೆಸಿಕೊಡಲಾಗುವುದು.
ಸಮಾಜಬಾಂಧವರು ಸದುಪಯೋಗ
ಪಡಿಸಿಕೊಳ್ಳಬಹುದು.

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಎ. ರಾಘವೇಂದ್ರ ರಾವ್ ಮೈಸೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್ ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್ ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್ ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣ ರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣ ಬೆಂಗಳೂರು, ಎನ್.ಪದ್ಮನಾಭ ರಾವ್ ಬೆಂಗಳೂರು, ಶ್ರೀ ವಸಂತ ಕೇದಿಗೆ ಮಂಗಳೂರು, ಶ್ರೀ ಪಿ. ಪ್ರಭಾಕರ ಭಂಡಿ

## ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘದವರಿಂದ ಚಿಟ್ಪಾಡಿ ವಲಯದ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವಿಕೆ










**ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಶಿವರಾತ್ರಿ ಸಂದರ್ಭ ಜರುಗಿದ ವಿವಿಧ ಕಾರ್ಯಕ್ರಮಗಳು**







ಕವನ

## ಮಹಿಳೆ

ಅನಾದಿ ಕಾಲದಿಂದಲೂ ಮಹಿಳೆ ಶೋಷಿತೆ
ಆಧುನಿಕ ಯುಗದಲ್ಲಿ ಪ್ರಮೀಳೆ ಬಲಿಷ್ಠೆ

ಸ್ತ್ರೀ ಅಬಲೆಯೆಂಬುದು ಬರೀ ಬೊಗಳೆ
ಪುರುಷಾಹಂಕಾರದ ಕೇವಲ ಹೆಗ್ಗಳಿಕೆ

ಸಂಸ್ಕೃತಿಯ ಪೋಷಕಳು
ರೀತಿ ರಿವಾಜುಗಳ ರಕ್ಷಕಳು
ಬೌದ್ಧಿಕವಾಗಿ ಉನ್ನತಳು

ಮಹಿಳೆ ಹೂಡಿದರೆ ಅಡುಗೆ ಮನೆಯಲ್ಲಿ ಮುಷ್ಕರ
ಆಗುವುದು ಕೌಟುಂಬಿಕ ವಾತವರಣ ಅಲ್ಲೋಲಕಲ್ಲೋಲ

ನಿಜ, ಹೆಣ್ಣು-ಪ್ರೇಮಮಯಿ, ವಾತ್ಸಲ್ಯಮಯಿ, ಕ್ಷಮಯಾಧರಿತ್ರಿ
ಸಂದರ್ಭ ಬಂದಲ್ಲಿ ಆಗುತ್ತಾಳೆ – ಚಂಡಿ, ಚಾಮುಂಡಿ, ರುದ್ರಕಾಳಿ

ಸಂಕೀರ್ಣ ಸ್ವರೂಪದ ಗಂಡು ಹೆಣ್ಣುಗಳ ಸಾಂಗತ್ಯ
ಪರಸ್ಪರ ವಿಶ್ವಾಸ, ನಂಬಿಕೆಗಳ ದಾಂಪತ್ಯ

ತುಳಿಯುತ್ತಾಳೆ – ವಿವಾಹದಲ್ಲಿ ವಧುವು ಸಪ್ತಪದಿಯನ್ನು
ಬಯಸುತ್ತಾಳೆ – ಸಂಗಾತಿಯಾದ ವರನ ಶ್ರೇಯೋಭಿವೃದ್ಧಿಯನ್ನು

ಜನ್ಮ ನೀಡುವೆ ನಿನ್ನ ಕಂದನನ್ನು
ಸಹಿಸಿ – ಅಪಾರ ಒತ್ತಡ, ನೋವನ್ನು

ಮಗು – ಮನುಕುಲದ ಅದ್ಭುತ
ಅದರ ಸೃಷ್ಟಿಗೆ ಕಾರಣಳಾಗುವ ನಿನ್ನ ವ್ಯಕ್ತಿತ್ವ ವಿಶಿಷ್ಟ

ಕೋಟಿ ಕೊಟ್ಟರೂ ಗಂಡಸಿಗಿಲ್ಲ ಈ ಭಾಗ್ಯ
ನಿಸರ್ಗವೇ ರೂಪಿಸಿದೆ ಈ ಪರಿಯ ನಿಯಮ

ದಾಸಿಯಲ್ಲ ನಿಮ್ಮ ಮನೆಯ ಹೊಂಗಿರಣ
ಕೆಲಸದಾಳಲ್ಲ, ನಿಮ್ಮ ಕುಟುಂಬದ ಆಶಾಕಿರಣ

ಮನೆಯವರ ಪಾಲಿಗೆ ಅನ್ನಪೂರ್ಣೆ
ಅನಾರೋಗ್ಯ ಕಾಡಿದಾಗ ಅಡುಗೆ ಮನೆಯ ವೈದ್ಯೆ

ಪಾಶ್ಚಾತ್ಯ ಮಾದರಿಯ ಸೂಪರ್ ವುಮೆನ್ ಪರಿಕಲ್ಪನೆ
ಭಾರತೀಯ ಮಹಿಳೆಯಾಗಿ, ನಿನಗೆ ಸಲ್ಲದಮ್ಮ
ಅದು ತರುವ ವೇದನೆ, ಯಾತನೆ, ನರಳಾಟ ನಿನಗೆ ಬೇಡದಮ್ಮ

ವಿಕಸಿತ ಭಾರತಕ್ಕೆ ನಾರೀ ಶಕ್ತಿಯ ಕೊಡುಗೆ ಖಚಿತ
ಮಹಿಳಾ ಸಬಲೀಕರಣದಿಂದ ಜಿ.ಡಿ.ಪಿ ಹೆಚ್ಚಳ ನಿಶ್ಚಿತ

ಆಕೆಯೂ ಒಬ್ಬ ಮಾನವಳು
ಅವಳಿಗೂ ಅನ್ವಯಿಸುತ್ತದೆ ಮಾನವ ಹಕ್ಕುಗಳು

ಜಾಗೃತ ನಾರಿ, ಆಗು ಕಿಶೋರಿ, ಬದುಕಿನ ರೂವಾರಿ
ನನ್ನ ದೇಹ, ನನ್ನ ಹಕ್ಕು ಎಂಬ ಸಿದ್ಧಾಂತದ ಪ್ರತಿಪಾದಕಿ

ಅಜ್ಜಿಯಾಗಿ, ತಾಯಿಯಾಗಿ, ಸಹೋದರಿಯಾಗಿ
ಪತ್ನಿಯಾಗಿ, ಮಗಳಾಗಿ, ಮೊಮ್ಮಗಳಾಗಿ
ಕಂಡಿರುವೆ ನಿನ್ನ ವಿವಿಧ ವೇಷ ಅವತಾರಗಳನ್ನು ವೈಯಕ್ತಿಕವಾಗಿ
ಸಾರ್ಥಕವಾಯಿತು ನನ್ನಿ ಪುರುಷ ಜನ್ಮ-ಧನ್ಯೋಸ್ಮಿ

ಹುಟ್ಟಬೇಕು, ಮಗಳ ಹೊಟ್ಟೆಯಲ್ಲಿಯೇ ಮಗಳಾಗಿ
ಮುಂದೊಮ್ಮೆ, ಮರುಜನ್ಮ ಪಡೆಯುದೇ ಆದಲ್ಲಿ

ಹೆಣ್ಣಿನಿಂದಲೇ ಇಹವು, ಹೆಣ್ಣಿನಂದಲೇ ಪರವು,
ಹೆಣ್ಣಿನಿಂದಲೇ ಸಕಲ ಸರ್ವಜ್ಞ

ಅಂತರ್-ರಾಷ್ಟ್ರೀಯ ಮಹಿಳಾ ದಿನಾಚರಣೆ
ಜಗದೆಲ್ಲ ಮಹಿಳೆಯರಿಗೆ ಅನಂತ ಕೃತಜ್ಞತೆ

– ಎಚ್. ಮಲ್ಲಿಕಾರ್ಜುನ ರಾವ್, ಕಾಪು
ಜಂಗಮವಾಣಿ : 9945885088

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894


ಕೆ. ದಿನಮಣಿ ಶಾಸ್ತ್ರೀ ಮೊಬೈಲ್ : 8277190632 9482284970
**ಚಿತ್ತಾರ ಫೋಟೋ ಆರ್ಟ್**
ಶುಭ ಸಮಾರಂಭಗಳ ಛಾಯಾಚಿತ್ರ ಮತ್ತು ವೀಡಿಯೋಗಾಗಿ ಕರೆಮಾಡಿ
ಚಿತ್ತಾರ, 3/96, ನವೋದಯನಗರ, ಚಾಂತಾರು, ಅಗ್ರಹಾರ, ಬ್ರಹ್ಮಾವರ-576213.

### Form IV

Statement about ownership and other particulars about newspaper (Sri Sharada) to be published in the first issue every year after the last day of February

1. Place of publication : **Shree Stanika Brahmana Sangha, Sri Sharada Mantapa, Kunjibettu, Udupi**
2. Periodicity of its publication : **Monthly**
3. Printer's Name : **Yathish Chandra**
   Nationality : **Indian**
   Address : **Shrinidhi Graphic Tech D.No. 8-7A1-12, Ground Floor, Shambhavi Crystal Biz Hub, Near D.C Office, Saralabettu Ward, Herga Village, Dist: UDUPI-576104**
4. Publisher's Name : **P. Prabhakara Bhandi**
   Nationality : **Indian**
   Address : **Secretary, Shree Stanika Brahmana Sangha, Kunjibettu, Udupi**
5. Editor's Name : **U. Aravinda Kumar**
   Nationality : **Indian**
   Address : **Shree Stanika Brahmana Sangha, Kunjibettu, Udupi**

I, Prabhakara Bhandi, hereby declare that the particulars given above are true to the best of my knowledge and belief.

Date : 15.03.2024 Signature of Publisher

## ಕಾವಳಕಟ್ಟೆ : ಗುರುಭವನದ ಶಿಲಾನ್ಯಾಸ



ದಿನಾಂಕ 21–02–2024 ರ ಬುಧವಾರ ಬೆಳಿಗ್ಗೆ ಶುಭ ಮುಹೂರ್ತದಲ್ಲಿ ಶ್ರೀ ಶೃಂಗೇರಿ ಜಗದ್ಗುರುಗಳಿಂದ ಪೂಜಿಸಲ್ಪಟ್ಟ ಶಿಲೆಗಳನ್ನು, ಜಗದ್ಗುರುವರ್ಯ ರಿಂದ ನೇಮಿಸಲ್ಪಟ್ಟ ದಕ್ಷಿಣ ಕನ್ನಡ ಜಿಲ್ಲಾ ಧರ್ಮದರ್ಶಿಗಳಾದ ಶ್ರೀಯುತ ಸತ್ಯಶಂಕರ ಬೊಳ್ಳಾವ ಇವರು ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಪ್ರತಿಷ್ಠಾನದ ಕಾವಳಪಡೂರು ಗ್ರಾಮದ ಕಾವಳಕಟ್ಟೆ ಎಂಬಲ್ಲಿರುವ ನಿವೇಶನದಲ್ಲಿ ಪ್ರತಿಷ್ಠಾಪಿಸುವ ಮೂಲಕ ಗುರುಭವನದ ಶಿಲಾನ್ಯಾಸ ಕಾರ್ಯಕ್ರಮವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಗುರುಗಳ ಶಿಷ್ಯವೃಂದದ ಅನೇಕ ಗಣ್ಯರು ಭಾಗವಸಿದ್ದರು.

## ಶುಭ ವಿವಾಹ

ಶ್ರೀ ಎನ್.ಎಸ್.ಹರಿಹರ ರಾವ್ ಮತ್ತು ಶ್ರೀಮತಿ ಶ್ಯಾಮಲಾ ರಾವ್ ದಂಪತಿಯ ಪುತ್ರಿ **ಚಿ। ಸೌ। ಅಪೂರ್ವ ಶ್ರೀದೇವಿ**ಯವರ ವಿವಾಹವು ಕುಬೇವೂರು ರವೀಂದ್ರ ಭಟ್ ಮತ್ತು ಶ್ರೀಮತಿ ವೀಣಾ ಭಟ್ ದಂಪತಿಯ ಪುತ್ರ **ಚಿ। ಸನತ್ ಭಟ್**ರವರೊಂದಿಗೆ ತಾ.03.03.2024ರಂದು ಒಕ್ಕಲಿಗ ಗೌಡ ಸಮುದಾಯ ಸಭಾಭವನದಲ್ಲಿ ಜರಗಿತು.

## ಶುಭ ಜನನ

ಬೆಂಗಳೂರು ನಿವಾಸಿ ಶ್ರೀಮತಿ ವೀಣಾ ಮತ್ತು ವಿಜಯಕುಮಾರರವರ ಪುತ್ರ **ಸುಪ್ರದೀಪ್** ಹಾಗೂ ಕಟಪಾಡಿ ನಿವಾಸಿ ಅಶೋಕ್ ರಾವ್ ಮತ್ತು ಶ್ರೀಮತಿ ಇವರ ಪುತ್ರಿ **ಅಶ್ವಿತಾ** ಇವರಿಗೆ ತಾ.06.02.2024 ರಂದು ಗಂಡು ಮಗುವಿನ ಜನನವಾಯಿತು.

★★★★ ★★★★

ಕೆಮ್ಮಣ್ಣು ಶಿವಾನಂದ ರಾವ್ ಮತ್ತು ಶ್ರೀಮತಿ ಚಂದ್ರಲೇಖ ಇವರ ಪುತ್ರ **ಅವನೀಶ್** ಮತ್ತು **ಶ್ರೀಮತಿ ವಿಭಾ** ಇವರಿಗೆ ತಾ.22–02–2024ರಂದು ಹೆಣ್ಣು ಮಗುವಿನ ಜನನವಾಯಿತು.

## ವೈದಿಕ ಶಿಬಿರ

**ಸ್ಥಾನಿಕ ಬ್ರಾಹ್ಮಣ ಮಹಾಮಂಡಲ, ಮಂಗಳೂರು ಇದರ ವತಿಯಿಂದ ನಮ್ಮ ಸಮಾಜ ಬಾಂಧವರಿಗೆ 10 ದಿನಗಳ ವೈದಿಕ ಶಿಬಿರವನ್ನು ನಡೆಸುವ ಉದ್ದೇಶದಿಂದ 19 ಸಂಘಗಳಲ್ಲಿಯೂ ಮೇ 12ರಿಂದ 10 ದಿನಗಳ ಕಾಲ ದಿನಕ್ಕೆ 2 ಗಂಟೆಗಳ ಸಂಧ್ಯಾವಂದನೆ, ಸಂಕ್ಷಿಪ್ತ ಪೂಜಾ ಪದ್ಧತಿಯನ್ನು ಕಲಿಸಿ ಕೊಡಲಾಗುವುದು. ಆಸಕ್ತ ಸಮಾಜ ಬಾಂಧವರು ಪ್ರಯೋಜನ ಪಡೆದುಕೊಳ್ಳಬಹುದು.**

**–ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಪದಾಧಿಕಾರಿಗಳು,**
ಸ್ಥಾನಿಕ ಬ್ರಾಹ್ಮಣ ಮಹಾಮಂಡಲ, ಮಂಗಳೂರು

## ಶ್ರೀ ಶೃಂಗೇರಿ ಶಂಕರ ಮಠ, ಉಡುಪಿ ಶಾಖೆ ಇದರ ನಿವೇಶನಕ್ಕೆ ಧನಸಹಾಯ ನೀಡಿದವರು

| | | |
|---|---|---|
| 105. | ಶ್ರೀಮತಿ ದಯಾವತಿ ರಾಧಾಕೃಷ್ಣ ರಾವ್, ಸುಳ್ಯ | 50,000/– |
| 106. | ಶ್ರೀ ಶಿವರಾವ್ ಕಟಪಾಡಿ | 25,000/– |
| 107. | ಶ್ರೀ ಎಂ. ರಾಜಶೇಖರ ರಾವ್, ಹೆಜಮಾಡಿ | 75,000/– |
| 108. | ಶ್ರೀಮತಿ ಮಾಲಿನಿ ವಿ. ರಾವ್ ಯು ಎಸ್ ಎ | 1,00,000/– |
| 109. | ಶ್ರೀ ಕೆ. ಸದಾಶಿವ ಶಾಸ್ತ್ರೀ, ಕುಳಾಯಿ | 25,000/– |
| 110. | ತೆಂಕಿಲ ಮತ್ತು ಎರಟಾಡಿ ಕುಟುಂಸ್ಥರು, ಪುತ್ತೂರು | 1,00,000/– |
| 111. | ಶ್ರೀ ಪವನ್ ರಾವ್ ಎಚ್, ಬೆಂಗಳೂರು | 25,000/– |
| 112. | ಶ್ರೀ ಎಂ ಸುಭಾಶ್ಚಂದ್ರ, ಮುಂಬಯಿ | 25,000/– |
| 113. | ಶ್ರೀ ಕೆ. ಸುಧಾಕರ ರಾವ್, ಉಡುಪಿ | 50,000/– |
| 114. | ಶ್ರೀ ಕೆ. ನವೀನಚಂದ್ರ ರಾವ್, ಉಡುಪಿ | 50,000/– |
| 115. | ಶ್ರೀ ಪಿ. ಶ್ರೀಕಾಂತ ರಾವ್, ಕೊಯಮುತ್ತೂರು | 25,000/– |
| 116. | ಡಾ। ನಾಗರತ್ನ ಶಾಸ್ತ್ರೀ, ಉಡುಪಿ | 1,00,000/– |

(ಮುಂದುವರಿಯುವುದು....)

**ಸಮಾಜ ಬಾಂಧವರ ಉದಾರ ಧನಸಹಾಯವನ್ನು ನಿರೀಕ್ಷಿಸುತ್ತೇವೆ.**

*'Dharmadhikari, Sri Sringeri Shankara Matha, Udupi Branch' ಈ ಹೆಸರಿನಲ್ಲಿ SB A/c no 0182500101876001, IFSC code - KARB 00 00 018 ಕರ್ನಾಟಕ ಬ್ಯಾಂಕ್, ಅಂಬಾಗಿಲು ಇಲ್ಲಿಗೆ ಸಲ್ಲುವಂತೆ ಚೆಕ್ / ಡಿಡಿ / ನೆಫ್ಟ್ ಇತ್ಯಾದಿಗಳನ್ನು ಕಳಿಸಬೇಕಾಗಿ ಪ್ರಾರ್ಥನೆ.


*80 ಜಿ ನಿಯಮದಂತೆ ತೆರಿಗೆ ವಿನಾಯಿತಿ ಬೇಕಿದ್ದವರು 'Sri Sringeri Sharada Peetham Charitable Trust, Sringeri' ಈ ಹೆಸರಲ್ಲಿ ಚೆಕ್/ಡಿಡಿ ಇತ್ಯಾದಿಗಳನ್ನು ನನಗೆ ಕಳಿಸಬೇಕಾಗಿ ವಿನಂತಿ. PAN ಸಂಖ್ಯೆ ಹಾಗೂ ವಿಳಾಸ ಬೇಕು.

**ವಾಗೀಶ ಎಸ್. ಶಾಸ್ತ್ರೀ**, ಧರ್ಮಾಧಿಕಾರಿ, ಉಡುಪಿ (9449591513)
ವನಸುಮ, ಶ್ರೀದುರ್ಗಾದೇವಸ್ಥಾನದ ಹತ್ತಿರ, ಪುತ್ತೂರು ಉಡುಪಿ 576105




RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ದೇವಿಕೃಪಾ ಏಜೆನ್ಸೀಸ್, ನಂದಿಕೂರು



ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

*With Best Complimemts From*
SRI M. SHAILESH RAO
B.E., Civil
Ph : 9448624324
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala

## ನಿಧನ



ದಿ। ಚಾರ್ಮಾಡಿ ಕಲ್ಲೊಟ್ಟು ವೆಂಕಟ್ರಮಣಯ್ಯ ಇವರ ಪತ್ನಿ, ಬೆಳ್ತಂಗಡಿ ಕುತ್ಯಾರು ಭಾಸ್ಕರ ರಾವ್ ಇವರ ಮಾತೃಶ್ರೀ ಶತಾಯುಷಿ ಶ್ರೀಮತಿ ಸುಬ್ಬಮ್ಮ ಅವರು ತಾ.19.02.2024ರಂದು ನಿಧನರಾದರು.

**** ****



ದಿ। ಕುಡ್ವ ಸಂಪತ್‌ಕುಮಾರ್ ಇವರ ಪತ್ನಿ, ಶ್ರೀಮತಿ ನಂದಿನಿ ಅವರು 74ನೇ ವಯಸ್ಸಿನಲ್ಲಿ ತಾ.22.02.2024ರಂದು ನಿಧನರಾದರು. ಅವರು ಓರ್ವ ಪುತ್ರ ಮತ್ತು ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

**** ****



ಸುಂದರ್ ರಾವ್ ಅವರ ಪತ್ನಿ ಶ್ರೀಮತಿ ಸುನಂದಾ ರಾವ್ ಅವರು ತಾ.06.02.2024ರಂದು ಮುಂಬೈನಲ್ಲಿ ನಿಧನರಾದರು. ಅವರು ಇಬ್ಬರು ಪುತ್ರರು ಮತ್ತು ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

**** ****



ದಿ। ಹೊಸಕೋಟೆ ಗೋಪಾಲ ರಾವ್, ನಾಯಕನಕಟ್ಟೆ, ಕೆರ್ಗಲ್ ಅವರ ಪತ್ನಿ ಶ್ರೀಮತಿ ಜಾನಕಿ ಗೋಪಾಲ ರಾವ್ ಅವರು 81ನೇ ವಯಸ್ಸಿನಲ್ಲಿ ತಾ.05–02–2024 ರಂದು ನಿಧನರಾದರು. ಅವರು ಮೂವರು ಪುತ್ರರು, ಓರ್ವ ಪುತ್ರಿ ಮತ್ತು ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

**** ****



ಮುಂಬೈಯ ಪಿಲಿಂಜ ದಿಲೀಪ್ ಜಿ ರಾವ್ ಅವರು 67ನೇ ವಯಸ್ಸಿನಲ್ಲಿ ತಾ.08.02.2024ರಂದು ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರರು ಮತ್ತು ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

**** ****



ಪ್ರೊಫೆಸರ್ ಅನಂತ ಪದ್ಮನಾಭ ರಾವ್ ಮಾರ್ಪಳ್ಳಿ ಅವರ ಪತ್ನಿ, ಎಲ್ಲೂರು ವೆಂಕಟ್ರಮಣ ರಾವ್ ಮತ್ತು ಶ್ರೀಮತಿ ಮಹಾಲಕ್ಷ್ಮೀ ಅವರ ಪುತ್ರಿ ಶ್ರೀಮತಿ ಸುನಂದಾ ಎ.ಪಿ.ರಾವ್ ಅವರು 72ನೇ ವಯಸ್ಸಿನಲ್ಲಿ 09.02.2024ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ಪತಿ, ಓರ್ವ ಪುತ್ರ, ಓರ್ವ ಪುತ್ರಿ ಮತ್ತು ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

**** ****



ಉಡುಪಿ ಪೂರ್ಣಪ್ರಜ್ಞ ಪದವಿಪೂರ್ವ ಕಾಲೇಜಿನ ಹಾಗೂ ಮೈಸೂರು ಸದ್‌ವಿದ್ಯಾ ಪ.ಪೂ.ಕಾಲೇಜಿನ ನಿವೃತ್ತ ಪ್ರಾಂಶುಪಾಲರೂ, ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಮಾಜಿ ನಿರ್ದೇಶಕ ಕೆ.ಎಸ್. ಪ್ರಭಾಕರ ರಾವ್ ಅವರು 80ನೇ ವಯಸ್ಸಿನಲ್ಲಿ ಮೈಸೂರಿನಲ್ಲಿ ತಾ.15.02.2024ರಂದು ನಿಧನರಾದರು. ಅವರು ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಮತ್ತು ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

**** ****



ದಿವಂಗತ ಪಡುಬಿದ್ರಿ ಭೋಜರಾವ್ ಅವರ ಪತ್ನಿ ಶ್ರೀಮತಿ ಪಡುಬಿದ್ರಿ ಗಿರಿಜಮ್ಮ ಅವರು 95ನೇ ವಯಸ್ಸಿನಲ್ಲಿ ತಾ.11.02.2024ರಂದು ನಿಧನರಾದರು. ಅವರು ಪುತ್ರ ಲಕ್ಷ್ಮೀಶ ಮತ್ತು ಪುತ್ರಿಯರಾದ ಪ್ರಫುಲ್ಲ, ಜಯಶ್ರೀ, ಶೋಭಾ ಮತ್ತು ಸುಜಾತಾ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

**** ****



ಶ್ರೀ ಕಾಳಾವರ ಸೀತಾರಾಮಯ್ಯನವರ ಪತ್ನಿ ಶ್ರೀಮತಿ ರತ್ನಮ್ಮ (ನಾಗವೇಣಿ) ಅವರು 87ನೇ ವಯಸ್ಸಿನಲ್ಲಿ ತಾ.12–02–2024ರಂದು ಧರ್ಮಾವರಂನಲ್ಲಿ ನಿಧನರಾದರು. ಅವರು ಇಬ್ಬರು ಹೆಣ್ಣು ಮಕ್ಕಳು, ಮತ್ತು ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

**** ****



ಕಬ್ಬಿನಾಲೆ ಹೊನ್ನಕೊಪ್ಪಲ ದಿ.ಮಲ್ಲೇಶ ಹೆಬ್ಬಾರ್ ಅವರ ಧರ್ಮಪತ್ನಿ ಮಹಾಲಕ್ಷ್ಮಿಯಮ್ಮ ಅವರು 89ನೇ ವಯಸ್ಸಿನಲ್ಲಿ ನಿಧನರಾದರು. ಅವರು ಆರು ಮಂದಿ ಪುತ್ರರು ಹಾಗೂ ಓರ್ವ ಪುತ್ರಿ ಮತ್ತು ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

**** ****



ದಿ। ನಂದಳಿಕೆ ಕಂಡೋಜಿ ಮನೆ ಪ್ರಭಾಕರ ರಾವ್ ಅವರ ಪತ್ನಿ (ದಿವಂಗತ ಕಂಕನಾಡಿ ಉಜ್ಜೋಡಿ ರಾಮರಾವ್ ಮತ್ತು ದಿ। ಶ್ರೀಮತಿ ಇಂದಿರಾ ರಾವ್ ಅವರ ಪುತ್ರಿ) ಶ್ರೀಮತಿ ಸರೋಜಿನಿ ಪಿ ರಾವ್ ಅವರು 82ನೇ ವಯಸ್ಸಿನಲ್ಲಿ ತಾ.03–03–2024ರಂದು ಶ್ಯಾಮದಾಮ ಮನೆ ನಂದಳಿಕೆಯಲ್ಲಿ ನಿಧನರಾದರು.

**** ****



ಮಂಗಳೂರಿನ ನಿವಾಸಿ ಪಿ.ಕೆ.ಕಿರೋಣ್ ಶಾಸ್ತ್ರಿ (ಪಿ.ಎಲ್.ಕೃಷ್ಣ ಶಾಸ್ತ್ರಿ ಮತ್ತು ಶ್ರೀಮತಿ ಪ್ರಭಾವತಿಯವರ ಪುತ್ರ) ಅವರು 62ನೇ ವಯಸ್ಸಿನಲ್ಲಿ ತಾ.10–03–2024ರಂದು ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರಿ ಮತ್ತು ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

**** ****



ಅಂಬಿಕಾ ವಿದ್ಯಾ ಸಂಸ್ಥೆಗಳ ಮಾತೃ ಸಂಸ್ಥೆ ನಟ್ಟೋಜ ಫೌಂಡೇಶನ್ ಟ್ರಸ್ಟ್ ಇದರ ಅಧ್ಯಕ್ಷರಾಗಿದ್ದ ನಟ್ಟೋಜ ಶಿವಾನಂದ ರಾವ್ ಅವರು 93ನೇ ವಯಸ್ಸಿನಲ್ಲಿ ತಾ.12–04–2024ರಂದು ಪುತ್ತೂರಿನಲ್ಲಿ ನಿಧನರಾದರು. ಅವರು ಪತ್ನಿ, ಪುತ್ರ ಅಂಬಿಕಾ ವಿದ್ಯಾಸಂಸ್ಥೆಗಳ ಮಾಲಕರಾದ ನಟ್ಟೋಜ ಸುಬ್ರಹ್ಮಣ್ಯ ರಾವ್ ಮತ್ತು ನಾಲ್ವರು ಪುತ್ರಿಯರು ಮತ್ತು ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ. ಪ್ರಗತಿಪರ ಕೃಷಿಕರಾಗಿದ್ದ ಅವರು ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯವಾಗಿ ಸಕ್ರಿಯರಾಗಿದ್ದು ಪುತ್ತೂರು ಬಿಜೆಪಿಯ ನಗರ ಮಂಡಲದ ಮಾಜಿ ಅಧ್ಯಕ್ಷರಾಗಿದ್ದರು. ಅಯೋಧ್ಯೆಯ ರಾಮ ಮಂದಿರ ಹೋರಾಟದಲ್ಲೂ ಗುರುತಿಸಿಕೊಂಡಿದ್ದರು.

### ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ: **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-00ರಿಂದ

**ತಾ.28-03-2024 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

ತಾ.01-04-2024 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

ತಾ.30-03-2024 ಹಾಗೂ 13.04.2024 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಮೀನ ಮಾಸದ ವಿಶೇಷ ದಿನಗಳು

| | | | |
|---|---|---|---|
| 14.03.2024 | ಮೀನ ಸಂಕ್ರಮಣ | 05.04.2024 | ಸರ್ವೈಕಾದಶೀ |
| 20.03.2024 | ಸರ್ವೈಕಾದಶೀ | 08.04.2024 | ಅಮಾವಾಸ್ಯೆ |
| 24.03.2024 | ಹೋಲಿಕಾ ಕಾಮದಹನ | 09.04.2024 | ಕ್ರೋಧಿ ನಾಮ ಸಂವತ್ಸರ, ವಸಂತ ಋತು, ಚೈತ್ರ ಮಾಸದ ಶುಕ್ಲ ಪಕ್ಷಾರಂಭ, ಚಾಂದ್ರ ಯುಗಾದಿ |
| 25.03.2024 | ಹುಣ್ಣಿಮೆ | | |
| 26.03.2024 | ಶಿಶಿರ ಋತು ಫಾಲ್ಗುಣ ಮಾಸದ ಕೃಷ್ಣ ಪಕ್ಷಾರಂಭ | 13.04.2024 | ಮೇಷ ಸಂಕ್ರಮಣ |
| 28.03.2024 | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 9.11ಕ್ಕೆ | 14.04.2024 | ಸೌರ ಯುಗಾದಿ |
| | | 17.04.2024 | ಶ್ರೀ ರಾಮನವಮಿ |

## ಕರ್ವಾಲು ಶ್ರೀ ಮನೋಹರ್ ಪ್ರಸಾದ್



ಕರ್ವಾಲು ಮನೋಹರ್ ಪ್ರಸಾದ್ ಅವರು ತಾ.01.03.2024ರಂದು ತಮ್ಮ 65ನೇ ವಯಸ್ಸಿನಲ್ಲಿ ಮಂಗಳೂರಿನಲ್ಲಿ ನಿಧನರಾಗಿರುತ್ತಾರೆ. ಹಿರಿಯ ಪತ್ರಕರ್ತರಾದ ಕೆ.ಮನೋಹರ್ ಪ್ರಸಾದ್ ಅವರು ಉದಯವಾಣಿ ಪತ್ರಿಕೆಯ ಮಂಗಳೂರು ವರದಿಗಾರರಾಗಿ ಸೇವೆ ಸಲ್ಲಿಸಿದ್ದರು. ಮೂಲತಃ ಕರ್ವಾಲಿನವರಾದ ಮನೋಹರ್ ಪ್ರಸಾದ್ ಅವರು ಮಂಗಳೂರಿನ ಕೆನರಾ ಕಾಲೇಜಿನಲ್ಲಿ ಕಾಲೇಜು ಪದವಿಯನ್ನು ಪೂರ್ಣಗೊಳಿಸಿದರು ಮತ್ತು ನವಭಾರತ್ ಪತ್ರಿಕೆಯಲ್ಲಿ ಪತ್ರಿಕೋದ್ಯಮವನ್ನು ಪ್ರಾರಂಭಿಸಿದರು. ಅಲ್ಲಿಂದ ಅವರು ಮುಖ್ಯ ವರದಿಗಾರ, ಬ್ಯೂರೋ ಮುಖ್ಯಸ್ಥ ಮತ್ತು ನಂತರ ಸಹಾಯಕ ಸಂಪಾದಕರಾಗಿದ್ದರು. ಉತ್ತಮ ಲೇಖಕರೂ, ನಿರೂಪಕರೂ ಆಗಿದ್ದ ಅವರು ಕರ್ವಾಲು ವಿಷ್ಣುಮೂರ್ತಿ ದೇವಸ್ಥಾನದ ಜೀರ್ಣೋದ್ಧಾರದಲ್ಲಿ ಸಹಕರಿಸಿದ್ದರು. ಸ್ಥಾನಿಕ ಸಮಾಜದವರಾಗಿದ್ದ ಅವರ ನಿಧನದಿಂದ ನಮ್ಮ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ.


PRODUCTS ARE AVAILABLE AT ATTRACTIVE DISCOUNT PRICES




BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.



# ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ) ಮಂಗಳೂರು ಕಾರ್ಯಕ್ರಮಗಳು



ಶ್ರೀ ಬಿಂಧುಮಾಧವ ಸ್ಥಾನಿಕ ಶಿವ ಬ್ರಾಹ್ಮಣ ಸಂಘ ಕಳಸ ತಾಲೂಕು, ಚಿಕ್ಕಮಗಳೂರು ಜಿಲ್ಲೆ ತಾ.25.02.2024ರಂದು ನಡೆದ ವಿಶೇಷ ಮಾಸಿಕ ಸಭೆಯಲ್ಲಿ ಮಹಾಮಂಡಳದ ಅಧ್ಯಕ್ಷರಾದ ಕುಚ್ಚೂರು ಮಂಜುನಾಥ ಹೆಬ್ಬಾರ್ ಇವರನ್ನು ಸನ್ಮಾನಿಸಲಾಯಿತು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಇವರು ಮಹಾಮಂಡಲದ ಮುಂದಿನ ಗುರಿ ಮತ್ತು ಧ್ಯೇಯವನ್ನು ಅರ್ಥಪೂರ್ಣವಾಗಿ ವಿವರಿಸಿದರು. ಸ್ಥಾನಿಕ ಮಹಾಮಂಡಲದ ಕಾರ್ಯದರ್ಶಿ ನಿಟ್ಟೆ ಮುರಳೀಧರ ಶರ್ಮಾ, ಮಹಾಮಂಡಲದ ಜೊತೆ ಕಾರ್ಯದರ್ಶಿ ಹಾಗೂ ಶ್ರೀ ಶಂಕರ ಪ್ರತಿಷ್ಠಾನ ಕಾರ್ಕಳ ಇದರ ಅಧ್ಯಕ್ಷರೂ ಆಗಿರುವ ಕೆ.ಎಸ್.ಕೇಶವ ರಾವ್, ಮಹಾಮಂಡಲದ ಕೋಶಾಧಿಕಾರಿ ಉದಯ ಬಾರ್ಕೂರು, ಶ್ರೀಮತಿ ಸಾವಿತ್ರಿ ಮನೋಹರ್, ಕಳಸ ಸಂಘದ ಹಿರಿಯರಾದ ರಾಮಚಂದ್ರ ಹೆಬ್ಬಾರ್, ಅಧ್ಯಕ್ಷರಾದ ಭಾಸ್ಕರ ರಾವ್, ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ತಾ.22.02.2024ರಂದು ಸ್ಥಾನಿಕ ಮಹಾಮಂಡಲದ ಪದಾಧಿಕಾರಿಗಳು, ಶಿವ ಬ್ರಾಹ್ಮಣ ಸ್ಥಾನಿಕ ಸಮಾಜ ಸೇವಾ ಸಂಘ ಪುತ್ತೂರು ಇದರ ನಿರ್ದೇಶಕರ ತಿಂಗಳ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಹಾಮಂಡಳದ 19 ಸಂಘಗಳ ಭೇಟಿ ಕಾರ್ಯಕ್ರಮವನ್ನು ಮುಂದುವರಿಸುತ್ತಾ, ಮಹಾಮಂಡಲದ ಮುಂದಿನ ಮೂರು ವರ್ಷದ ಗುರಿ, ಸಂಘದೊಂದಿಗೆ ನಿರಂತರ ಸಂಪರ್ಕ ಮುಂತಾದ ವಿಷಯಗಳ ಬಗ್ಗೆ ಮಾಹಿತಿ ನೀಡಲಾಗಿದ್ದು ಹಾಗೂ ಮುಂದಿನ ವಿಶ್ವ ಮಟ್ಟದ ಸ್ಥಾನಿಕ ಬ್ರಾಹ್ಮಣ ಸಮ್ಮೇಳನದ ಬಗ್ಗೆಯೂ ಚರ್ಚಿಸಲಾಯಿತು. ಮಹಾಮಂಡಲದ ಅಧ್ಯಕ್ಷರಾದ ಮಂಜುನಾಥ್ ಹೆಬ್ಬಾರ್, ಪೂರ್ವಾಧ್ಯಕ್ಷ ಜಗನ್ನಿವಾಸ ರಾವ್, ಕಾರ್ಯದರ್ಶಿ ಕೆ. ಮುರಳೀಧರ ಶರ್ಮಾ ನಿಟ್ಟೆ, ಕೆ ಪ್ರಭಾಕರ ರಾವ್, ಉದಯ ಬಾರ್ಕೂರು, ಕೇಶವ ರಾವ್ ಕಾರ್ಕಳ ಹಾಗೂ ಪುತ್ತೂರು ಸಂಘದ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.



ತಾ.11.2.2024ನೇ ಭಾನುವಾರ ಸುರತ್ಕಲ್ ಸಂಘಕ್ಕೆ ಬೇಟಿ ನೀಡಿ ಮುಂದಿನ 3 ವರ್ಷದ ಮಹಾಮಂಡಲದ ಗುರಿಯನ್ನು ಸಭೆಯಲ್ಲಿ ತಿಳಿಸಲಾಯಿತು. ಆ ಸಂದರ್ಭದಲ್ಲಿ ಮಹಾಮಂಡಲದ ಅಧ್ಯಕ್ಷರು, ಕಾರ್ಯದರ್ಶಿ, ಕೋಶಾಧಿಕಾರಿ ಹಾಗೂ ಸುರತ್ಕಲ್ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಉಪಸ್ಥಿತರಿದ್ದರು.



ತಾ.15.01.2024ರಂದು ಸ್ಥಾನಿಕ ಮಹಾಮಂಡಲದ ಪದಾಧಿಕಾರಿಗಳು, ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಂಘ ಕಡಬ ಇದರ "ಸ್ಥಾನಿಕೋತ್ಸವ" ಕಾರ್ಯಕ್ರಮದಲ್ಲಿ ಭಾಗವಹಿಸಿ ಮಹಾಮಂಡಳದ 19 ಸಂಘಗಳ ಭೇಟಿ ಕಾರ್ಯಕ್ರಮವನ್ನು ಮುಂದುವರಿಸುತ್ತಾ, ಮಹಾಮಂಡಲದ ಮುಂದಿನ ಮೂರು ವರ್ಷದ ಗುರಿ, ಸಂಘದೊಂದಿಗೆ ನಿರಂತರ ಸಂಪರ್ಕ ಮುಂತಾದ ವಿಷಯಗಳ ಬಗ್ಗೆ ಮಾಹಿತಿ ನೀಡಲಾಗಿ ಮುಂದಿನ ಮೂರು ವರ್ಷಗಳ ಕಾರ್ಯಕ್ರಮ ಯೋಜನೆಯ ಪಟ್ಟಿಯನ್ನು ಮಂಡಲದ ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್‌ರವರು ಸಭೆಗೆ ನೀಡಿದರು. ಮಹಾಮಂಡಲದ ಅಧ್ಯಕ್ಷರಾದ ಮಂಜುನಾಥ್ ಹೆಬ್ಬಾರ್, ಮಂಡಲದ ಸ್ಥಾಪಕ ಅಧ್ಯಕ್ಷ ಶ್ರೀ ಸಿ.ಎಸ್.ರಾವ್, ಉದಯ ಬಾರ್ಕೂರು ಹಾಗೂ ಕಡಬ ಸಂಘದ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

## ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ) ಮಂಗಳೂರು
## ಕಾರ್ಯಕಾರಿ ಸಮಿತಿ ಸಭೆ ಹಾಗೂ ಲ್ಯಾಪ್‌ಟಾಪ್ ವಿತರಣೆ



ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ (ರಿ) ಮಂಗಳೂರು ಇದರ ಮೊದಲ ಕಾರ್ಯಕಾರಿ ಸಮಿತಿ ಸಭೆಯು ತಾ.18.02.2024ರರಂದು ಶ್ರೀ ಶಾರದಾ ಮಂಟಪ ಉಡುಪಿ ಇದರ ಸಭಾಂಗಣದಲ್ಲಿ ಮಂಜುನಾಥ ಹೆಬ್ಬಾರರ ಅಧ್ಯಕ್ಷತೆಯಲ್ಲಿ ನಡೆಯಿತು. ಕುಮಾರಿ ಅನನ್ಯಾಳ ಪ್ರಾರ್ಥನೆ ಯೊಂದಿಗೆ ಸಭೆಯು ಆರಂಭ ವಾಯಿತು. ಅಧ್ಯಕ್ಷರಾದ ಮಂಜುನಾಥ ಹೆಬ್ಬಾರರು ಸದಸ್ಯರೆಲ್ಲರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮೊದಲ ತ್ರೈಮಾಸಿಕದಲ್ಲಿ ನಡೆದ ಕಾರ್ಯಕ್ರಮಗಳನ್ನು ವಿವರಿಸಿ ಮುಂದಿನ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು ಹಾಗೂ ಸಹಕಾರ ವಿತ್ತವರಿಗೆ ಅಭಿನಂದಿಸಿ ದರು. ತಮ್ಮ ಮಾತುಗಳಲ್ಲಿ ಎಲ್ಲ ಸಂಘಗಳು ತಮ್ಮ ಸ್ವಂತ ನಿವೇಶನ ಹಾಗೂ ಕಟ್ಟಡವನ್ನು ಹೊಂದುವರೆ ಮಹಾಮಂಡಲವು ಸಂಘಗಳು ಮತ್ತು ದಾನಿಗಳ ನೆರವಿನಿಂದ ಒಗ್ಗೂಡಿ ಸಂಘಗಳನ್ನು ಬಲಪಡಿಸುವಲ್ಲಿ ಸಂಪೂರ್ಣ ಸಹಕಾರವನ್ನು ನೀಡುತ್ತದೆ ಎಂದರು.

ಮುಂದೆ ಮಹಾಮಂಡಲದ ಪ್ರಧಾನ ಕಾರ್ಯದರ್ಶಿ ಕೆ.ಮುರಲಿದರ ಶರ್ಮಾ ನಿಟ್ಟೆ ಮೊದಲ ತ್ರೈಮಾಸಿಕದ ಮಹಾ ಮಂಡಲದ ಕಾರ್ಯ ಚಟುವಟಿಕೆಗಳ ವರದಿಯನ್ನು ನೀಡಿದರು ಶ್ರೀ ಉದಯ ಬಾರ್ಕೂರು ಕೋಶಾಧಿಕಾರಿ ಅವರು ಲೆಕ್ಕಪತ್ರಗಳನ್ನು ಮಂಡಿಸಿದರು.


ಕು.ಅನನ್ಯ ಅವರಿಗೆ ಸ್ಥಾನಿಕ ಸಹಾಯ ನಿಧಿಯಿಂದ ಲ್ಯಾಪ್‌ಟಾಪ್ ವಿತರಿಸ ಲಾಯಿತು. ವಿವಿಧ ಕಡೆಗಳಲ್ಲಿ ನಮ್ಮವರನ್ನು ಗುರುತಿಸಿ, ಮಾತುಕತೆ ನಡೆಸಿ ಸಂಘಗಳ ಸ್ಥಾಪನೆ ಬಗ್ಗೆ ನಿರ್ಧರಿಸಲಾಯಿತು. ನಮ್ಮ ಸಮಾಜದ ಕಟ್ಟಕಡೆಯ, ಅತೀ ಬಡವರ ಆರೋಗ್ಯ, ಶಿಕ್ಷಣ, ಹಾಗೂ ವಸತಿ ಇತ್ಯಾದಿ ಯೋಜನೆಗಳನ್ನು ಹಮ್ಮಿಕೊಳ್ಳುವರೆ ದಾನಿಗಳಿಂದ ಧನ ಸಹಾಯವನ್ನು ಪಡೆದು ಕಾರ್ಯಕಮ ಕೈಗೊಳ್ಳುವರೇ "ಸ್ಥಾನಿಕ ಸಹಾಯ ನಿಧಿ" ಯನ್ನು ಸ್ಥಾಪಿಸಿ ಮಹಾಮಂಡಲವು ನಮ್ಮ ಸಮಾಜದ ಅಶಕ್ತರ ಅಭಿವೃದ್ಧಿಗಾಗಿ ಶ್ರಮಿಸುವುದೆಂದು ತೀರ್ಮಾನಿಸಲಾಯಿತು.

ನೂತನ ಸದಸ್ಯರಾದ ರಮೇಶ್ ರಾವ್ ಕಾರ್ಕಳ ಹಾಗೂ ಸುಬ್ರಹ್ಮಣ್ಯ ಶ್ಯಾನುಭಾಗ್ ಇವರನ್ನು ಗುರುತಿಸಲಾಯಿತು. ಸ್ಥಾಪಕಾಧ್ಯಕ್ಷರಾದ ಸಿ.ಎಸ್.ರಾವ್, ಕೆ.ಪ್ರಭಾಕರ ರಾವ್, ಡಾ। ವೈ.ಎಸ್.ರಾವ್, ಡಾ। ವೈ.ರವೀಂದ್ರನಾಥ ರಾವ್ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಕೊನೆಯಲ್ಲಿ ಶ್ರೀ ಚಂದ್ರಶೇಕರ ರಾವ್ ಇವರು ಧನ್ಯವಾದವನ್ನು ಸಮರ್ಪಿಸಿದರು.

## ವೈದ್ಯಕೀಯ ನೆರವು

ತಾ.28.02.2024ರಂದು ಬ್ರಹ್ಮಾವರ ತಾಲೂಕು ವಡ್ಡರ್ಸೆಯ ನಮ್ಮ ಸಮಾಜದ ಮನೆಗೆ ತೆರಳಿ ಕಳೆದ ಮೂರು ವರ್ಷಗಳಿಂದ ಪಾರ್ಶ್ವವಾಯುಗೆ ಗುರಿಯಾಗಿ ಕಷ್ಟ ಅನುಭವಿಸುತ್ತಾ, ಆರ್ಥಿಕವಾಗಿಯೂ ನೊಂದಿದ್ದ ಕುಟುಂಬವನ್ನು ಅವರ ಪತ್ನಿಯ ಕೋರಿಕೆಯ ಮೇರೆಗೆ ಭೇಟಿಯಾಗಿ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ವೈದ್ಯಕೀಯ ನಿಧಿಯಿಂದ 20000 (10000 ಸ್ಥಾನಿಕ ಸಹಾಯ ನಿಧಿ) ಹಣವನ್ನು ನೀಡಲಾಯಿತು. ಮುಂದೆಯೂ ಕಷ್ಟಕಾಲದಲ್ಲಿ ಸಮಾಜ ಬಾಂಧವರ ನೆರವಿನಿಂದ ಸಹಕರಿಸುವುದಾಗಿ ಭರವಸೆ ಕೊಟ್ಟರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರು ಹಾಗೂ ಕೋಶಾಧಿಕಾರಿ ಉಪಸ್ಥಿತರಿದ್ದರು.

## ಶಾಸ್ತ್ರೀಯ ಸಂಗೀತ ಕಾರ್ಯಕ್ರಮ



ಕಣಿಪುರ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಪುನಃಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವದ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಕಾಸರಗೋಡಿನ ವಿದುಷಿ ರಾಧಾ ಮುರಳೀಧರ ಹಾಗೂ ಶ್ರೀಮತಿ ಶ್ವೇತಾ ನಾಗೇಶ್ ಚೆನ್ನೈ ಇವರು ಶಾಸ್ತ್ರೀಯ ಸಂಗೀತವನ್ನು ಪ್ರಸ್ತುತಪಡಿಸಿದರು. ಅವರೊಂದಿಗೆ ವಯಲಿನ್‌ನಲ್ಲಿ ಪ್ರಭಾಕರ ಕುಂಜಾರು ಮತ್ತು ಮೃದಂಗದಲ್ಲಿ ವಸಂತಕೃಷ್ಣ ಕಾಂಚನ ಸಹಕರಿಸಿದರು.






## "ಧರ್ಮನಿಷ್ಠೆಯ ಬದುಕು ನಮ್ಮದಾಗಲಿ"

### ಶ್ರೀ ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರು



ಜಗತ್ತಿಗೆ ಆಧಾರವಾಗಿರುವುದು ಧರ್ಮ. ಸುಖ ದುಃಖಗಳೇನೇ ಇರಲಿ ಯಾವ ಫಲ ಯಾರಿಗೆ ಲಭಿಸಬೇಕು ಅದು ಧರ್ಮಾಧಾರಿತವಾಗಿರುತ್ತದೆ. ನಮ್ಮ ಬದುಕು ಧರ್ಮನಿಷ್ಠವಾಗಿರಬೇಕು ಎಂಬುದಾಗಿ ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಂ ಶೃಂಗೇರಿ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಮಂಗಳೂರಿನ ಕೋಟೆಕಾರು ಶಂಕರ ಮಠದಲ್ಲಿ ಫೆಬ್ರವರಿ 17ರಂದು ಜರುಗಿದ ಅಭಿನಂದನಾ ಕಾರ್ಯಕ್ರಮದಲ್ಲಿ ಅಭಿವಂದನೆ ಸ್ವೀಕರಿಸಿ ಆಶೀರ್ವಚನ ನೀಡಿದರು.

ಸನಾತನ ವೈದಿಕ ಧರ್ಮವು ಆದಿ–ಅಂತ್ಯವಿಲ್ಲದ ಧರ್ಮವಾಗಿದೆ. ಇದನ್ನು ನಾವು ನಾಶಮಾಡುತ್ತೇವೆ ಎಂದು ಹಲವರು ಹೇಳುತ್ತಿರುವುದು ಮತ್ತು ಈ ದಿಕ್ಕಿನಲ್ಲಿ ಹಲವು ಪ್ರಯತ್ನಗಳು ನಡೆಯುತ್ತಿರುವುದನ್ನು ನೋಡುತ್ತಿದ್ದೇವೆ. ಇದರಿಂದ ನಾವು ಆತಂಕಗೊಳ್ಳುವುದು ಸಹಜ. ಆದರೆ ಇಂತಹ ಆತಂಕಕ್ಕೆ ಭಗವಂತನೇ ಉತ್ತರ ನೀಡಿದ್ದು ಧರ್ಮಕ್ಕೆ ಸಂಕಷ್ಟ ಎದುರಾದಾಗ ಅವನೇ ಅವತಾರ ಎತ್ತಿ ಬರುವುದರಿಂದ ಇಂತಹ ಯಾವುದೇ ಆತಂಕಕ್ಕೆ ಎಡೆಯಿಲ್ಲ. ಆದರೆ ನಮ್ಮ ಧರ್ಮರಕ್ಷಣಾ ಪ್ರಯತ್ನಗಳು ನಿರಂತರ ನಡೆಯುತ್ತಿರಬೇಕು ಎಂಬುದಾಗಿ ಆಶೀರ್ವಚಿಸಿದರು.


ಶೃಂಗೇರಿ ಶ್ರೀ ಶಾರದಾ ಪೀಠದ ಪ್ರಧಾನ ಸಲಹೆಗಾರರಾದ ಡಾ। ವಿ.ಆರ್.ಗೌರೀಶಂಕರ್, ಮುಖ್ಯಕಾರ್ಯನಿರ್ವಹಣಾಧಿಕಾರಿ ಪಿ.ಎ.ಮುರಳಿ, ಕೋಟೇಕಾರು ಶ್ರೀ ಶೃಂಗೇರಿ ಶಂಕರ ಮಠದ ಧರ್ಮಾಧಿಕಾರಿ ಸತ್ಯಶಂಕರ ಬೊಳ್ಳಾವ, ಕರ್ನಾಟಕ ಬ್ಯಾಂಕಿನ ನಿವೃತ್ತ ಆಡಳಿತ ನಿರ್ದೇಶಕ ಮಹಾಬಲೇಶ್ವರ ಭಟ್, ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ ಬೆಂಗಳೂರಿನ ಮಾಜಿ ಅಧ್ಯಕ್ಷರಾದ ಶಿವರಾವ್ ಅಜ್ಜಾವರ ಇವರೆಲ್ಲರೂ ಜತೆಗೂಡಿ ಗುರುಗಳನ್ನು ಅಭಿವಂದಿಸಿದರು. ಹಿರಣ್ಯ ವೆಂಕಟೇಶ್ವರ ಭಟ್ ಬಾಯಾರು ಅಭಿವಂದನಾ ಭಾಷಣ ಮಾಡಿದರು.



ಹರ್ಷಕುಮಾರ್ ಕೇದಿಗೆ ಮತ್ತು ಶ್ರೀಮತಿ ಕನಕವಲ್ಲಿ ದಂಪತಿಯ ಪುತ್ರಿ ಸ್ಥಾನಿಕಾ ಸಾಧಕಿ ವಿದುಷಿ ಪ್ರೀತಿಕಾ ರಾವ್ ಅವರನ್ನು ಕರ್ನಾಟಕ ಬುಕ್ ಆಫ್ ರೆಕಾರ್ಡ್ಸ್ ಮತ್ತು ನೃತ್ಯಾಂಗ ನೃತ್ಯೋತ್ಸವವು ಭಾರತೀಯ ಶಾಸ್ತ್ರೀಯ ಕಲೆ ಮತ್ತು ಸಂಸ್ಕೃತಿಯನ್ನು ಉತ್ತೇಜಿಸಲು ಗುರುಗಳಾಗಿ ಅಮೂಲ್ಯವಾದ ಕೊಡುಗೆಗಾಗಿ 'ಪವರ್ ವುಮೆನ್' ಎಂದು ಗೌರವಿಸಿತು.









SHREE SHARADA – Printed and Published by P. Prabhakara Bhandy on behalf of
Shree Stanika Brahmana Sangha. Printed at Shrinidhi Graphic Tech, D.No. 8-7A1-12, Ground Floor, Shambhavi Crystal Biz Hub, Near D.C Office, Saralabettu Ward, Herga Village, Dist : UDUPI - 576104, Karnataka. Published at : Shri Stanika Brahmana Sangha, Shri Sharada Mantapa, Sharada Nagara, Kunjibettu, Udupi - 576 102. Editor : U. Aravinda Kumar